ಮಾನವಸಂಪನ್ಮೂಲವಿಭಾಗ/मानवसंसाधनअनुभाग/**HUMAN RESOURCES SECTION**
ಭಾರತೀಯವಿಜ್ಞಾನಸಂಸ್ಥೆ/भारतीयविज्ञानसंस्थान/**INDIAN INSTITUTE OF SCIENCE**
ಬೆಂಗಳೂರು/बेंगलूर/**BANGALORE – 560012**
ದೂರವಾಣಿ/**दूरभाष/TELEPHONE: 2293 2232**
ಇ-ಮೇಲ್/E-mail/ईमेल : **recruitment.nt@iisc.ac.in**

## ಜಾಹೀರಾತು ಸಂಖ್ಯೆ. ಆರ್ (ಎಚ್ ಆರ್) ನೇಮಕಾತಿ-6/2023 – (ನೇರ ನೇಮಕಾತಿ)

## ಜೂನಿಯರ್ ಇಂಜಿನಿಯರ್ (ಸಿವಿಲ್/ಎಲೆಕ್ಟ್ರಿಕಲ್)

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಯಾದ 'ಭಾರತೀಯ ವಿಜ್ಞಾನ ಸಂಸ್ಥೆ' ರಾಷ್ಟ್ರಕ್ಕೆ ಒಂದು ಶತಮಾನಕ್ಕೂ ಹೆಚ್ಚು ಕಾಲ ಪ್ರಮುಖ ಕೊಡುಗೆಗಳನ್ನು ಪೂರ್ಣಗೊಳಿಸಿದೆ. ಹೊಸ ಮೂಲಸೌಕರ್ಯಗಳು (ಕಟ್ಟಡಗಳು ಮತ್ತು ಉಪಕರಣಗಳು), ಹಲವಾರು ಹೊಸ ಅಂತರಶಿಸ್ತೀಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ ಹಾಗೂ ಗುಣಮಟ್ಟದ ಅಧ್ಯಾಪಕರೊಂದಿಗೆ ಸುಧಾರಿತ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ವಿಶ್ವದ ಮುಂಚೂಣಿ ಸಂಸ್ಥೆಯಾಗುವ ಹಾದಿಯಲ್ಲಿದೆ.

ಸಂಸ್ಥೆಯು ನೇರ ನೇಮಕಾತಿ ಮೂಲಕ ಈ ಕೆಳಗಿನ ಹುದ್ದೆಗಳಿಗೆ ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ:

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಘಟಕ | ಖಾಲಿ ಹುದ್ದೆಗಳ ಸಂಖ್ಯೆ | | | | ವಯೋ ಮಿತಿ* | (ವೇತನ ಹಂತ) ಪೇ ಮ್ಯಾಟ್ರಿಕ್ಸ್ ಲೆವೆಲ್ (7ನೇ ಸಿಪಿಸಿ ಅನುಸಾರ) |
|---|---|---|---|---|---|---|---|---|
| | | | ಸಾಮಾನ್ಯ | ಒಬಿಸಿ - ಎನ್ ಸಿ ಎಲ್ | ಎಸ್ ಸಿ | ಒಟ್ಟು | | |
| 1. | ಜೂನಿಯರ್ ಎಂಜಿನಿಯರ್ (ಸಿವಿಲ್) | ಕ್ಯಾಂಪಸ್ ನಿರ್ವಹಣೆ ಮತ್ತು ಅಭಿವೃದ್ಧಿ | 4 | - | 1 | 5** | 35 ವರ್ಷ | ಹಂತ – 06 (ರೂ. 35,400 – 1,12,400) |
| 2. | ಜೂನಿಯರ್ ಎಂಜಿನಿಯರ್ (ಎಲೆಕ್ಟ್ರಿಕಲ್) | | 1 | 1 | - | 2 | | |

* ಅರ್ಜಿ ಸ್ವೀಕೃತಿಯ ಅಂತಿಮ ದಿನಾಂಕಕ್ಕೆ ಅನ್ವಯವಾದಂತೆ.
** ಪಿಡಬ್ಲ್ಯುಬಿಡಿ (ವರ್ಗ III) ಗಾಗಿ ಒಂದು ಹುದ್ದೆಯನ್ನು ಕಾಯ್ದಿರಿಸಲಾಗಿದೆ. ಒಂದು ತೋಳು ಬಾಧಿತ (ಒಎ) / ಒಂದು ಕಾಲು ಬಾಧಿತ (ಒಎಲ್).

### ನಿಗದಿತ ಕನಿಷ್ಠ ಶೈಕ್ಷಣಿಕ ಅರ್ಹತೆ / ಅನುಭವ:

**ಶೈಕ್ಷಣಿಕ ಅರ್ಹತೆ:** ಕನಿಷ್ಠ 55% ಅಂಕಗಳೊಂದಿಗೆ ಸಿವಿಲ್ / ಎಲೆಕ್ಟ್ರಿಕಲ್‌ನಲ್ಲಿ ಪದವಿ ಅಥವಾ 3-ವರ್ಷದ ಡಿಪ್ಲೊಮಾ ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇದಕ್ಕೆ ಸಮಾನವಾದ ಗ್ರೇಡ್.

**<u>ಸೇವಾನುಭವ:</u>** ಕೇಂದ್ರ / ರಾಜ್ಯ ಸರ್ಕಾರ ಅಥವಾ ಸ್ವಾಯತ್ತ ಸಂಸ್ಥೆಗಳು ಅಥವಾ ರಾಜ್ಯ / ಕೇಂದ್ರೀಯ ವಿಶ್ವವಿದ್ಯಾಲಯಗಳು ಅಥವಾ ಸಾರ್ವಜನಿಕ ವಲಯದ ಉದ್ದಿಮೆ (ಪಿ ಎಸ್ ಯು) ಗಳಲ್ಲಿ ನೇಮಕಗೊಂಡ ಉದ್ಯೋಗದಲ್ಲಿ ಅಥವಾ ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರದ ಮೇಲೆ ಬೃಹತ್ ನಿರ್ಮಾಣ ಯೋಜನೆಗಳಲ್ಲಿ (ರೂ. 10 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯ) ಅಂದಾಜುಗಳ ತಯಾರಿಕೆ ಅಥವಾ ಇ-ಟೆಂಡರ್ ಅಥವಾ ಸೈಟ್ ಮೇಲ್ವಿಚಾರಣೆ/ ಉಸ್ತುವಾರಿಯಲ್ಲಿ 3 ವರ್ಷಗಳ ಅನುಭವ. ಹಾಗೂ ಕಂಪ್ಯೂಟರ್ ಏಡೆಡ್ ಡಿಸೈನ್ (ಸಿಎಡಿ) ಜ್ಞಾನ.

## <u>ನಿಯಮಗಳು ಮತ್ತು ಷರತ್ತುಗಳು:</u>

1. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು.
2. ಮೇಲೆ ತಿಳಿಸಿದಂತೆ 7ನೇ ಸಿಪಿಸಿ ಪ್ರಕಾರ ಪೇ ಮ್ಯಾಟ್ರಿಕ್ಸ್‌ನಲ್ಲಿನ ವೇತನದ ಜೊತೆಗೆ, ಐಐಎಸ್ಸಿ ನಿಯಮಗಳ ಅನುಸಾರ ಹುದ್ದೆಗಳಿಗೆ ಅನುಗುಣವಾದ ವೇತನ ಶ್ರೇಣಿಯಲ್ಲಿ ಅನುಮತಿಸುವ ಸಾಮಾನ್ಯ ಭತ್ಯೆಗಳು ಸಹ ಇರಲಿವೆ.
3. ಜೂನಿಯರ್ ಇಂಜಿನಿಯರ್ (ಸಿವಿಲ್) ಹುದ್ದೆಗಳು ಅಂಗವೈಕಲ್ಯ ಹೊಂದಿರುವ ದಿವ್ಯಾಂಗ ಅಭ್ಯರ್ಥಿಗಳಿಗೆ ಸೂಕ್ತವಾಗಿವೆ. ಒಂದು ತೋಳು ಬಾಧಿತ (ಒಎ) / ಒಂದು ಕಾಲು ಬಾಧಿತ (ಒ ಎಲ್).
4. ದಿವ್ಯಾಂಗ ವ್ಯಕ್ತಿಗಳು, ಎಸ್ ಸಿ, ಒಬಿಸಿ-ಎನ್ ಸಿ ಎಲ್ ಅಭ್ಯರ್ಥಿಗಳು ಮತ್ತು ಸಂಸ್ಥೆಗೆ ಅನ್ವಯವಾಗುವಂತೆ ಭಾರತ ಸರ್ಕಾರದ ನಿಯಮಗಳ ಪ್ರಕಾರ ಮಾಜಿ ಸೈನಿಕರಿಗೆ ವಯೋಮಿತಿ ಸಡಿಲಿಕೆಗಳು ಅನ್ವಯಿಸುತ್ತವೆ. ಗರಿಷ್ಠ ವಯೋಮಿತಿ ಸಡಿಲಿಕೆ (ಎಲ್ಲಾ ವಿಭಾಗಗಳನ್ನು ಒಳಗೊಂಡಂತೆ) 55 ವರ್ಷಗಳವರೆಗೆ ನೀಡಲಾಗುತ್ತದೆ.
5. ಒಬಿಸಿ ಅಭ್ಯರ್ಥಿಗಳು ಮಾನ್ಯವಾದ ಒಬಿಸಿ (ನಾನ್- ಕ್ರೀಮಿ ಲೇಯರ್) ಪ್ರಮಾಣಪತ್ರವನ್ನು ನೀಡಬೇಕು.
6. ಜೂನಿಯರ್ ಇಂಜಿನಿಯರ್ ಹುದ್ದೆಯು 2 ವರ್ಷಗಳ ಪ್ರೊಬೇಷನ್ ಅವಧಿಯೊಂದಿಗೆ ನಿಯಮಿತ ಆಧಾರದ ಮೇಲೆ ಇರಲಿದೆ.
7. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಯಾವುದೇ ವಿಷಯದಲ್ಲಿ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ. ಭೌತಿಕ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
8. ಸೇವಾನುಭವ(ಸೇವಾನುಭವಗಳು)ನ್ನು ಬೆಂಬಲಿಸುವ ಪ್ರಮಾಣಪತ್ರ(ಗಳು) ಉದ್ಯೋಗದಾತರ ಸಂಸ್ಥೆಯ ಲೆಟರ್‌ಹೆಡ್ ನಲ್ಲಿ, ನೀಡಲಾದ ದಿನಾಂಕದೊಂದಿಗೆ ಇರಬೇಕು.
9. ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವಿವರಗಳನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಅದರ ನಂತರ ಯಾವುದೇ ಬದಲಾವಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಇಡೀ ನೇಮಕಾತಿ ಪ್ರಕ್ರಿಯೆಗೆ ಅದನ್ನೇ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಪ್‌ಲೋಡ್ ಮಾಡಿದ ದಾಖಲೆಗಳು ಸ್ಪಷ್ಟವಾಗಿರಬೇಕು ಮತ್ತು ಸರಿಯಾಗಿ ಕಾಣುವಂತಿರಬೇಕು.
10. ನಿಗದಿತ ವಿದ್ಯಾರ್ಹತೆಗಳು ಮತ್ತು ಅನುಭವವು ಹುದ್ದೆಗೆ ಅಗತ್ಯವಿರುವ ಕನಿಷ್ಠ ಅರ್ಹತೆಯಾಗಿರುತ್ತದೆ. ಆದರೆ ಅಭ್ಯರ್ಥಿಯು ಅದನ್ನು ಹೊಂದಿದ್ದಾನೆ ಎಂಬ ಅಂಶವು ಅವನನ್ನು/ಅವಳನ್ನು ಸಂದರ್ಶನ ಮತ್ತು/ಅಥವಾ ಲಿಖಿತ ಪರೀಕ್ಷೆಗೆ ಕರೆಯಲು ಅರ್ಹವಾಗುವುದಿಲ್ಲ. ಅರ್ಹತೆಗಳು ಮತ್ತು ಅನುಭವದ ಆಧಾರದ ಮೇಲೆ ಸಂದರ್ಶನಕ್ಕೆ

ಕರೆಯಬಹುದಾದ ಅಭ್ಯರ್ಥಿಗಳ ಸಂಖ್ಯೆಯನ್ನು ಸಮಂಜಸವಾದ ಸಂಖ್ಯೆಗೆ ಮಿತಗೊಳಿಸಲು ಸಂಸ್ಥೆ ಹಕ್ಕು ಕಾಯ್ದಿರಿಸಿಕೊಂಡಿರುತ್ತದೆ.

11. ಹುದ್ದೆಗೆ ಆಯ್ಕೆಯು ಸಂದರ್ಶನ ಮತ್ತು/ಅಥವಾ ಲಿಖಿತ ಪರೀಕ್ಷೆಯ ಮೂಲಕ ಇರುತ್ತದೆ.
12. ಎಲ್ಲಾ ಅಭ್ಯರ್ಥಿಗಳು ಪ್ರಸ್ತುತ ಉದ್ಯೋಗದಾತರಿಂದ (ಅನ್ವಯವಾಗುವಲ್ಲೆಲ್ಲಾ) ನಿರಾಕ್ಷೇಪಣ ಪತ್ರ - ಎನ್ ಒ ಸಿ ಪಡೆದುಕೊಳ್ಳಬೇಕು ಮತ್ತು ಅದನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಆದಾಗ್ಯೂ, ಅಭ್ಯರ್ಥಿಯು ವೈಯಕ್ತಿಕವಾಗಿ ದಾಖಲೆ ಪರಿಶೀಲನೆಯ ಸಮಯದಲ್ಲಿ ಎನ್‌ಒಸಿಯನ್ನು ಸಲ್ಲಿಸಲಾಗುವುದು ಎಂದು ಸರಿಯಾಗಿ ಸಹಿ ಮಾಡಿದ ಒಪ್ಪಂದ ಪತ್ರವನ್ನು ಅಪ್‌ಲೋಡ್ ಮಾಡಿದರೆ ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.
13. ಕೊನೆಯ ದಿನಾಂಕದವರೆಗೆ ಕಾಯದೆ, ಸಾಕಷ್ಟು ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಬೇಕು.
14. ಸಂದರ್ಶನ ಮತ್ತು/ಅಥವಾ ಲಿಖಿತ ಪರೀಕ್ಷೆಗೆ ಹಾಜರಾಗಲು ಆಮಂತ್ರಣ ಪತ್ರಗಳನ್ನು ಅಂತಿಮ ಕಿರು ಪಟ್ಟಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನೋಂದಾಯಿತ ಮೇಲ್ ಅನ್ನು ಆಗಾಗ್ಗೆ ಪರಿಶೀಲಿಸಬೇಕಾಗುತ್ತದೆ. ಶಾರ್ಟ್-ಲಿಸ್ಟ್ ಮಾಡದ/ಸಂದರ್ಶನ /ಅಥವಾ ಲಿಖಿತ ಪರೀಕ್ಷೆಗೆ ಆಹ್ವಾನಿಸದ ಅರ್ಜಿದಾರರೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
15. ಯಾವುದೇ ಕಾರಣವನ್ನು ನೀಡದೆಯೇ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ. ಯಾವುದೇ ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹೀರಾತು/ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.
16. ಸೇವೆಯ ಅವಧಿಯಲ್ಲಿ, ಪ್ರತಿಯೊಬ್ಬ ಉದ್ಯೋಗಿಯು ಯೋಜನೆ, ನಿಯಮಗಳು ಮತ್ತು ಬೈಲಾಗಳು (ಎಸ್ ಆರ್ ಬಿ), ಆಡಳಿತಾತ್ಮಕ ಕೈಪಿಡಿಗಳು, ಇತರ ಶಾಸನಬದ್ಧ ದಾಖಲೆಗಳು, ಸಿಸಿಎಸ್ (ನಡವಳಿಕೆ) ನಿಯಮಗಳು ಮತ್ತು ಸಿಸಿಎಸ್ (ಸಿಸಿಎ) ನಿಯಮಗಳು ಇತ್ಯಾದಿಗಳನ್ನು ಗಮನಿಸಬೇಕು, ಅನುಸರಿಸಬೇಕು ಮತ್ತು ಪಾಲಿಸಬೇಕು.
17. ಸಂಸ್ಥೆಯ ಸೇವೆಗೆ 2004ರ ಜನವರಿ 1ರಂದು ಅಥವಾ ನಂತರ ಸೇರ್ಪಡೆಯಾಗುವವರು ಹೊಸ ಪಿಂಚಣಿ ಯೋಜನೆಯಡಿ ಒಳಪಡುತ್ತಾರೆ. ಆದಾಗ್ಯೂ, 31.12.2003 ಕ್ಕಿಂತ ಮೊದಲು ಸೇವೆಗೆ ಪ್ರವೇಶಿಸಿದ ಮತ್ತು ಸಿಸಿಎಸ್ (ಪಿಂಚಣಿ) ನಿಯಮಗಳು, 1972 ರ ಮೂಲಕ ನಿರ್ವಹಿಸಲ್ಪಟ್ಟ ನೌಕರರು - ಈ ಉದ್ದೇಶಕ್ಕಾಗಿ ಭಾರತ ಸರ್ಕಾರ ನಿಗದಿಪಡಿಸಿದ ಷರತ್ತುಗಳ ನೆರವೇರಿಕೆಗೆ ಒಳಪಟ್ಟು 'ಜಿಪಿಎಫ್-ಕಮ್-ಪಿಂಚಣಿ-ಕಮ್-ಗ್ರಾಚ್ಯುಟಿ' ಯೋಜನೆಗೆ ಅರ್ಹರಾಗಿರುತ್ತಾರೆ.
18. ಎಲ್ಲಾ ಹುದ್ದೆಗಳಿಗೆ ನಿವೃತ್ತಿಯ ವಯಸ್ಸು 60 ವರ್ಷಗಳು.
19. ಸೇವೆಯ ಸಮಯದಲ್ಲಿ ಅಭ್ಯರ್ಥಿಯು ಸಲ್ಲಿಸಿದ ಪೂರ್ವವಿವರಗಳು ಅಥವಾ ದಾಖಲೆಗಳನ್ನು ಯಾವುದೇ ವೇಳೆ ಪರಿಶೀಲಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅಭ್ಯರ್ಥಿಯು ಸಲ್ಲಿಸಿದ ದಾಖಲೆಗಳು ಅಸಲಿಯಲ್ಲ ಎಂದು ಕಂಡುಬಂದಲ್ಲಿ, ನಂತರ ಅವನ/ಅವಳ ಸೇವೆಗಳನ್ನು ಕೊನೆಗೊಳಿಸಲಾಗುತ್ತದೆ ಮತ್ತು ಶಿಸ್ತು/ಕ್ರಿಮಿನಲ್ ಮೊಕದ್ದಮೆಗಳನ್ನು ಆರಂಭಿಸಲಾಗುತ್ತದೆ.
20. ಸಿಜಿಪಿಎ/ಜಿಪಿಎ ವ್ಯವಸ್ಥೆಯಡಿಯಲ್ಲಿ ಡಿಪ್ಲೊಮಾ/ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಪದವಿಗಳನ್ನು ಪಡೆದ ಅಭ್ಯರ್ಥಿಗಳು ಸಿಜಿಪಿಎ/ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಬೇಕು. ಅಭ್ಯರ್ಥಿಗಳು ತಾವು ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ವಿಶ್ವವಿದ್ಯಾಲಯ/ ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ

ಸಲ್ಲಿಸಲು ಸೂಚಿಸಲಾಗಿದೆ. ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಅದರ ಪುರಾವೆಯನ್ನು (ವಿಶ್ವವಿದ್ಯಾಲಯ/ಸಂಸ್ಥೆಯಿಂದ ನೀಡಲಾದ ಪತ್ರ) ಸಲ್ಲಿಸಬೇಕು.

21. ಫಲಿತಾಂಶಗಳನ್ನು ಪ್ರಕಟಿಸುವ ಮೊದಲು ಅರ್ಜಿದಾರರು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ವಿವರಗಳನ್ನು ಸರಿಯಾಗಿ ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ಭರ್ತಿ ಮಾಡಿದ ವಿವರಗಳಿಗೆ ಅಧಿಕೃತ ಪುರಾವೆಗಳನ್ನು ಒದಗಿಸಲು ವಿಫಲವಾದರೆ, ಅವರ ಉಮೇದುವಾರಿಕೆಯನ್ನು ಒಟ್ಟಾರೆಯಾಗಿ ಮುಟ್ಟುಗೋಲು ಹಾಕಲಾಗುತ್ತದೆ.
22. ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ವಿವಾದವು ಬೆಂಗಳೂರಿನ ಗೌರವಾನ್ವಿತ ನ್ಯಾಯಾಲಯ/ನ್ಯಾಯಮಂಡಳಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.
23. ಅಧಿಸೂಚನೆಯ ಇಂಗ್ಲಿಷ್ ಮತ್ತು ಇತರ ಭಾಷೆಯ ಆವೃತ್ತಿಗಳ ನಡುವಿನ ಅರ್ಥವಿವರಣೆಯ ಕಾರಣದಿಂದಾಗಿ ಯಾವುದೇ ಅಸ್ಪಷ್ಟತೆ/ವಿವಾದಗಳು ಉದ್ಭವಿಸಿದರೆ, ಇಂಗ್ಲಿಷ್ ಆವೃತ್ತಿಯಲ್ಲಿ ವಿವರಿಸಲಾದ ಸೂಚನೆಗಳು ಅಂತಿಮವಾಗಿರುತ್ತದೆ.
24. ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿ ಪೋರ್ಟಲ್ 28.07.2023 ರಿಂದ 26.08.2023 (ರಾತ್ರಿ 11:59 ರವರೆಗೆ) ತೆರೆದಿರುತ್ತದೆ.

ಆಸಕ್ತ ವ್ಯಕ್ತಿಗಳು ಸಂಸ್ಥೆಯ ಪೋರ್ಟಲ್: https://iisc.ac.in/careers/ ಗೆ ಭೇಟಿ ನೀಡಲು ವಿನಂತಿಸಲಾಗಿದೆ ಹಾಗೂ ತಮ್ಮ ಶೈಕ್ಷಣಿಕ ಅರ್ಹತೆಗಳು, ವಯಸ್ಸು, ಸಮುದಾಯ, ಅಂಗವೈಕಲ್ಯ, ಅನುಭವ, ಎನ್‌ಒಸಿ ಮತ್ತು ಇತರ (ಯಾವುದಾದರೂ ಇದ್ದರೆ) ದಾಖಲೆಗಳೊಂದಿಗೆ ತಮ್ಮ ಉಮೇದುವಾರಿಕೆ ಬೆಂಬಲಿಸುವ ಪ್ರಮಾಣಪತ್ರಗಳನ್ನು 26.08.2023 ರಂದು ಅಥವಾ ಅದಕ್ಕೂ ಮುನ್ನ ಅಪ್‌ಲೋಡ್ ಮಾಡಲು ಕೋರಲಾಗಿದೆ.

**ಅರ್ಜಿ ಸಲ್ಲಿಸಲು ಆನ್ ಲೈನ್ ಲಿಂಕ್:** https://recruitment.iisc.ac.in/regular_recruitment/index.php

**ದಿನಾಂಕ : 28.07.2023** **ಕುಲಸಚಿವರು**